ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**O.S. No.597/2017. P.W.-1.**

ದಿನಾಂಕ:**31.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಪಿ ಬಿ ಎಸ್ ವಕೀಲರಿಂದ:-

ನನ್ನ ಮುತ್ತಜ್ಜನ ಹೆಸರು ಕರಿಕೆ ಮಠದ ಲಿಂಗಪ್ಪ ಬಿನ್ ಬಸಣ್ಣ ಎಂದರೆ ಸರಿ. ದಾವಾ 1 ನೇ ಅನುಸೂಚಿ ಸ್ವತ್ತನ್ನು ನಿಪಿ 26 ರ ಪ್ರಕಾರ ನನ್ನ ಮುತ್ತಜ್ಜ ಕ್ರಯಕ್ಕೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮುತ್ತಜ್ಜ ಲಿಂಗಪ್ಪನಿಗೆ ಮೂರು ಜನ ಮಕ್ಕಳು ಎಂದರೆ ಸರಿ, ಅವರುಗಳೆಂದರೆ ಸಿದ್ದಯ್ಯ, ಬಸಯ್ಯ, ನನ್ನ ಅಜ್ಜ ಶಿವಶಂಕರಪ್ಪ. ನನ್ನ ಮುತ್ತಜ್ಜ ಅವರು ಖರೀದಿಸಿದ 1 ನೇ ದಾವಾ ಅನುಸೂಚಿ ಸ್ವತ್ತನ್ನು ದಿ:02.01.1970 ರಲ್ಲಿ ಅವರ ಮೂರು ಜನ ಮಕ್ಕಳಿಗೆ ವಿಭಾಗ ಮಾಡಿ ನೊಂದಾಣಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರವು ಈಗ ನೋಡುತ್ತಿರುವ ವಿಭಾಗ ಪತ್ರವೇ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ವಿಭಾಗ ಪತ್ರದ ದೃಢೀಕೃತ ಪ್ರತಿ ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

ನಿಡಿ 1 ರ ವಿಭಾಗ ಪತ್ರದಂತೆ ನನ್ನ ಅಜ್ಜ ಶಿವಶಂಕರಪ್ಪನಿಗೆ ಸರ್ವೆ ನಂ.930 ರಲ್ಲಿ 1 ಎಕರೆ 14 ½ ಗುಂಟೆ, ಸರ್ವೆ ನಂ.512 ರಲ್ಲಿ 1 ಎಕರೆ 22 ½ ಗುಂಟೆ, ಸರ್ವೆ ನಂ.1208/2 ರಲ್ಲಿ 27 ½ ಗುಂಟೆ ಜಮೀನು ಮತ್ತು 1 ನೇ ದಾವಾ ಅನುಸೂಚಿ ಸ್ವತ್ತು ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಬಂದಿರಬಹುದು ಆದರೆ ನನಗೆ 1 ನೇ ದಾವಾ ಅನುಸೂಚಿ ಸ್ವತ್ತಿನ ಬಗ್ಗೆ ಮಾತ್ರ ಗೊತ್ತಿರುತ್ತದೆ. ಈ ಮೇಲೆ ಹೇಳಿದ ಸ್ವತ್ತುಗಳಲ್ಲಿ 1 ನೇ ದಾವಾ ಅನುಸೂಚಿ ಸ್ವತ್ತನ್ನು ಹೊರತು ಪಡಿಸಿ ಬೇರೆ ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಾರಾಟವನ್ನು ನಾನು, ನನ್ನ ತಂದೆ-ತಾಯಿ, ಪ್ರತಿವಾದಿ ಸಂ.1, 3 ರಿಂದ 8 ರವರು ಪ್ರಶ್ನಿಸಿಲ್ಲ ಎಂದರೆ ಸರಿ. 1 ನೇ ದಾವಾ ಅನುಸೂಚಿ ಸ್ವತ್ತನ್ನು ಹೊರತು ಪಡಿಸಿ ಉಳಿದ ಸ್ವತ್ತುಗಳನ್ನು ನನ್ನ ಅಜ್ಜ 3 ರಿಂದ 8 ನೇ ಪ್ರತಿವಾದಿಗಳ ಮದುವೆಯ ಖರ್ಚಿಗೋಸ್ಕರ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಮಾರಾಟದ ಪತ್ರಗಳಿಗೆ 1 ನೇ ಪ್ರತಿವಾದಿ, 3 ರಿಂದ 8 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಜ್ಜ ಶಿವಶಂಕರಪ್ಪರವರ ಮರಣದ ನಂತರ ಪೌತಿ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ 1 ನೇ ದಾವಾ ಅನುಸೂಚಿ ಸ್ವತ್ತಿನ ಖಾತೆ ಆಗಿರುತ್ತದೆ ಎಂದರೆ ಸರಿ. ನನ್ನ ಅಜ್ಜ ಶಿವಶಂಕರಪ್ಪನ ಮರಣದ ನಂತರ ಕುಟುಂಬದ ವ್ಯವಹಾರವನ್ನು ನನ್ನ ಅಜ್ಜಿ 1 ನೇ ಪ್ರತಿವಾದಿ ನೋಡಿಕೊಂಡು ಬರುತ್ತಿದ್ದರು ಎಂದರೆ ಸರಿ. 2002 ರಲ್ಲಿ ಅಂದರೆ ನನ್ನ ಅಜ್ಜಿಯ ಹೆಸರಿಗೆ ಖಾತೆ ಬದಲಾವಣೆಯಾಗುವಾಗ 1 ನೇ ದಾವಾ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ಅಡಿಕೆ ಬೆಳೆ ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅಡಿಕೆ, ತೆಂಗು ಬೆಳೆ ಇತ್ತು. 1 ನೇ ದಾವಾ ಅನುಸೂಚಿ ಸ್ವತ್ತಿನ ಆದಾಯದಿಂದಲೇ ನಮ್ಮ ಕುಟುಂಬದ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಕುಟುಂಬದ ಸದಸ್ಯರು ಕೂಲಿ ಕೆಲಸಕ್ಕೂ ಸಹಃ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಈ ರೀತಿಯ ಎರಡೂ ಆದಾಯದಿಂದ ನಮ್ಮ ಕುಟುಂಬದ ನಿರ್ವಹಣೆ ಮಾಡುತ್ತಿದ್ದರು. ಅಂದರೆ 1 ನೇ ದಾವಾ ಅನುಸೂಚಿ ಸ್ವತ್ತಿನಿಂದ ಬಂದ ಆದಾಯದಿಂದ ಜೀವನ ನಿರ್ವಹಣೆಗೆ ಸಾದ್ಯವಾಗದೇ ಇದ್ದ ಕಾರಣದಿಂದಲೇ ನನ್ನ ತಂದೆ-ತಾಯಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ವಿದ್ಯಾಭ್ಯಾಸ ಮಾಡುತ್ತಿದ್ದೆ. 2002 ರಲ್ಲಿ UKG ಓದುತ್ತಿದ್ದೆ. ಹಾಗಾಗಿ ನನಗೆ ಕುಟುಂಬದ ನಿರ್ವಹಣಾ ವ್ಯವಸ್ಥೆಯ ಬಗ್ಗೆ ವೈಯಕ್ತಿವಾಗಿ ಮಾಹಿತಿ ಇಲ್ಲ ಎಂದರೆ 2002 ರಲ್ಲಿ ಮಾಹಿತಿ ಇರಲಿಲ್ಲ. 2002 ರಲ್ಲಿ ನಮ ಕುಟುಂಬದಲ್ಲಿ ಏನು ಆಗಿತ್ತು ನನ್ನ ತಂದೆ-ತಾಯಿ, 1 ನೇ ಪ್ರತಿವಾದಿಗೆ ಗೊತ್ತಿರುತ್ತದೆ.

1 ನೇ ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಲು 1, 3 ರಿಂದ 8 ನೇ ಪ್ರತಿವಾದಿಗಳಿಗೆ ಸಮಾನವಾದ ಹಕ್ಕು ಅಧಿಕಾರ ಇದೆ ಎಂದರೆ ಸರಿ. 1, 4 ರಿಂದ 8 ನೇ ಪ್ರತಿವಾದಿಗಳ ಹಕ್ಕನ್ನು ನಮಗೆ ಕೇಳಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿ.

1 ನೇ ದಾವಾ ಅನುಸೂಚಿ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಲ್ಲ ಎಂದರೆ ಸರಿಯಲ್ಲ. 1 ನೇ ದಾವಾ ಅನುಸೂಚಿ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಪಹಣಿ-ಎಂ.ಆರ್-ಆರ್.ಆರ್ ಗಳನ್ನು ಹಾಜರುಪಡಿಸಿರುತ್ತೇನೆ. 1 ನೇ ದಾವಾ ಅನುಸೂಚಿ ಸ್ವತ್ತಿನಲ್ಲಿ ನಮಗೆ ಹಕ್ಕು ಅಧಿಕಾರ ಇದೆ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಅದು ಪಿತ್ರಾರ್ಜಿತ ಆಸ್ತಿ ನಾವು ಪಹಣಿ-

ಎಂ.ಆರ್-ಆರ್.ಆರ್ ಗಳನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ.

ನನ್ನ ತಂದೆ 9 ನೇ ಪ್ರತಿವಾದಿಗೆ 1 ನೇ ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡುವಾಗ ನಮ್ಮ ಪರವಾಗಿ ಸಹಿ ಹಾಕಿಲ್ಲ ಎಂಬ ಉದ್ದೇಶಕ್ಕೆ ಈ ದಾವೆ ಹೂಡಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ಹಕ್ಕನ್ನು ಮಾರಾಟ ಮಾಡಿರುತ್ತಾರೆ ಎಂದು ಈ ದಾವೆ ಹೂಡಿರುತ್ತೇನೆ.

1 ನೇ ದಾವಾ ಅನುಸೂಚಿ ಸ್ವತ್ತನ್ನು ಮಾರಿದ ನಂತರ ಅದರಿಂದ ಬಂದ ಹಣವನ್ನು 1, 3 ರಿಂದ 8 ನೇ ಪ್ರತಿವಾದಿಗಳು ಸಮನಾಗಿ ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ವಾದ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿ ನಾನು ವಾಸವಿದ್ದೇವೆ ಎಂದರೆ ನಾವು ಬೇರೆ ವಿಳಾಸದಲ್ಲಿ ವಾಸವಾಗಿದ್ದೇವೆ. ನಾವು ಈಗ ಶಿವಣ್ಣ ರವರ ಬಾಡಿಗೆ ಮನೆಯಲ್ಲಿ ವಾಸವಿದ್ದೇವೆ. ವಾದ ಪತ್ರದಲ್ಲಿ ನಮೂದಿಸಿರುವ ವಿಳಾಸದಲ್ಲಿ ನನ್ನ ತಂದೆ-ತಾಯಿ ವಾಸವಾಗಿದ್ದಾರೆ. ಈ ದಾವೆ ಹೂಡುವ ಪೂರ್ವದಲ್ಲಿ ನಾನು, ನನ್ನ ತಂದೆ-ತಾಯಿ, ನನ್ನ ಅಜ್ಜಿ ಜೊತೆಯಲ್ಲಿ ಇದ್ದೆವು ಎಂದರೆ ಸರಿ. 2002 ರಿಂದ 2017 ರ ವರೆಗೂ ನನ್ನ ತಂದೆ-ತಾಯಿಯ ಆರೈಕೆಯನ್ನು ನನ್ನ ತಂದೆ-ತಾಯಿಯ ಮೂರು ಜನ ಮಕ್ಕಳುಗಳು ನೋಡಿಕೊಳ್ಳುತ್ತಿದ್ದೆವು ಎಂದರೆ ಸರಿ. ನನ್ನ ತಂದೆ-ತಾಯಿ ಮತ್ತು ಅಜ್ಜಿಯ ಜೊತೆ ಗಲಾಟೆಯಾದ ನಂತರ ನಾನು ಬೇರೆ ವಾಸವಾಗಿದ್ದೇನೆ ಎಂದರೆ ಸರಿ. ಈ ವಿಚಾರವನ್ನು ವಾದಪತ್ರದಲ್ಲಿ ಹೇಳಿರುವಿರೇ ಎಂದರೆ ಸಾಕ್ಷಿಯು ಬೇರೆ ವಾಸವಾಗಿರುವುದನ್ನು ಹೇಳಿರುತ್ತೇನೆ, ಆದರೆ ಯಾವ ಮನೆಯಲ್ಲಿ ಎಂದು ಹೇಳಿರುವುದಿಲ್ಲ.

ನನ್ನ ಮೊದಲನೇ ತಂಗಿ ಪದ್ಮಿನಿಗೆ (2 ನೇವಾದಿ) ಬುದ್ಧಿ ಮಾಂದ್ಯತೆ ಇರುತ್ತದೆ ಎಂದರೆ ಸರಿ. 2 ನೇ ವಾದಿಗೆ ಚಿಕಿತ್ಸೆಯನ್ನು ನನ್ನ ತಂದೆ-ತಾಯಿ ಕೊಡಿಸಿರುತ್ತಾರೆ ಎಂದರೆ ಚಿಕಿತ್ಸೆ ಕೊಡಿಸಿರುವುದಿಲ್ಲ, ಊಟ-ತಿಂಡಿ ವ್ಯವಸ್ಥೆಯನ್ನು ಮಾತ್ರ ನೋಡಿಕೊಂಡು ಬರುತ್ತಿದ್ದರು.

ಈ ದಾವೆ ದಾಖಲಾದ ನಂತರ ಅಂದರೆ ಕಳೆದ ಸು.4 ವರ್ಷಗಳ ಹಿಂದೆ ವನಜಾಕ್ಷಿ ರವರು ಮೃತಪಟ್ಟಿರುತ್ತಾರೆ. ಸದರಿ ವನಜಾಕ್ಷಿ ರವರು ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ, ಅವರು ಮದುವೆಯಾಗಿದ್ದರು, ಮಕ್ಕಳು ಇರಲಿಲ್ಲ, ಅವರ ಗಂಡ ಎಲ್ಲಿಗೋ ಹೋದವರು ಪುನಾ ಬಂದಿರುವುದಿಲ್ಲ. ವನಜಾಕ್ಷಿ ರವರು ಅವರ ಗಂಡ ಬಿಟ್ಟು ಹೋದ

ನಂತರದಲ್ಲಿ ನನ್ನ ಅಜ್ಜಿಯ ಜೊತೆ ವಾಸವಾಗಿದ್ದರು ಎಂದರೆ ಸರಿಯಲ್ಲ.

1 ನೇ ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಲು ವನಜಾಕ್ಷಿ ರವರಿಗೆ ಒಪ್ಪಿಗೆ ಇತ್ತು ಎಂದರೆ ಸರಿಯಲ್ಲ. ಆ ಕಾರಣದಿಂದಲೇ ನಾವು ವನಜಾಕ್ಷಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

1 ನೇ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ನನಗೆ ಯಾವುದೇ ಹಕ್ಕು-ಅಧಿಕಾರ-ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.